## ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
## ಬೆನಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**ಸಿ ಸಿ ನಂಃ 8570 - 2023**

ಪಿರ್ಯಾದುದಾರರು ವೈಟ್ ಫೀಲ್ಡ್ ಸಂಚಾರ ಅಭಕಾರಿ ಠಾಣೆ.

ವಿರುದ್ಧ

ಆರೋಪಿ ಃ ಮುಲ್ಲಾ ಉಸೆನ ಬಾಷಾ.

**ಕ್ರಿಮಿನಲ್ ಪ್ರಕ್ರಿಯ ಸಂಹಿತೆ ಕಲಂಃ 351 (1) (ಬಿ) ಅಡಿಯಲ್ಲಿ ಆಪಾಧಿತರ ಹೇಳಿಕೆಗಳು**

1. ಅಭಿಯೋಜನಾ ಸಾಕ್ಷಿದಾರರು ನ್ಯಾಯಾಲಯದಲ್ಲಿ ಸಾಕ್ಷಿ ನೀಡಿರುವುದನ್ನು ನೀವು ಕೇಳಿಸಿಕೊಂಡಿದ್ದೀರಾ?
ಉತ್ತರಃ

2. ಪ್ರಾ.ಸಾ.1 ಬಸವರಾಜ ರವರು ತಮ್ಮ ಸಾಕ್ಷಿಯನ್ನು ನುಡಿಯುತ್ತಾ ದಿನಾಂಕ 10.04.2023 ರಂದು ನಾನು ದಸ್ತು ಕತ್ಯವ್ಯದಲ್ಲಿದ್ದಾಗ ಕಂಟೇನರ್ ಯಾರ್ಡ ಹತ್ತಿರ ಜನರ ಗುಂಪು ಸೇರಿದ್ದು ನಾನು ಹೋಗಿ ವಿಚಾರಣೆ ಮಾಡಲಾಗಿ ಅಲ್ಲಿ ಅಪಘಾವಾಗಿತ್ತದೆ ಎಂದು ತಿಳಿಸಿರುತ್ತಾರೆ. ಗೀರಿಶ್ ಗೌಡ ಎಂಬ ಪಾದಚಾರಿ ರಸ್ತೆ ದಾಟುವಾಗ ಬಜಾಜ್ ಮೋಟರ್ ಬೈಕ್ ಸವಾರನು ಅವರಿಗೆ ಡಿಕ್ಕಿ ಪಡಿಸಿ ಅಪಘಾತವಾಗಿರುವುದಾಗಿ ತಿಳಿಸಿರುತ್ತಾರೆ. ನಾನು ನೋಡಿದಾಗ ಪಾದಚಾರಿ ಮತ್ತು ಬೈಕ ಸವಾರ ಇಬ್ಬರು ಗಾಯಗೊಂಡಿದ್ದರು ಅವರನ್ನು ಆಟೋ ಮೂಲಕ ವೈದೇಹಿ ಆಸ್ಪತ್ರೆಗೆ ಕಳುಹಿಸಿರುತ್ತೇನೆ. ಅದನ್ನು ಠಾಣೆಧಿಕಾರಿಗಳಿಗೆ ತಿಳಿಸಿ ದೂರು ಕೊಟ್ಟಿರುತ್ತೇನೆ ಎಂದು ಸಾಕ್ಷ ನೀಡಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

3. ಪ್ರಾ.ಸಾ.3 ರಾಘವೇಂದ್ರ ರವರು ತಮ್ಮ ಸಾಕ್ಷಿಯನ್ನು ನುಡಿಯುತ್ತಾ ದಿನಾಂಕ 06.05.2023 ರಂದು ಈ ಪ್ರಕರಣದ ಕಡತವನ್ನು ಚಾಸಾ 17 ರವರಿಂದ ಕಡತವನ್ನು ಪಡೆದು ತನಿಖೆ ಮುಂದುವರೆಸಿ ದಿನಾಂಕ 08.05.2023 ರಂದು ಆರೋಪಿಯ ಗಾಯದ ಪ್ರಮಾಣ ಪತ್ರವನ್ನು ವೈದೇಹಿ ಆಸ್ಪತ್ರೆಯಿಂದ ಪಡೆದುಕೊಂಡಿರುತ್ತೇನೆ. ದಿನಾಂಕ 25.06.2023 ರಂದು ಮೃತನ ಪಿ.ಎಮ್ ವರದಿಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ತನಿಖೆ ಮುಗಿದಿದ್ದರಿಂದ ದೋಷಾರೋಪಣಾ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸಾಕ್ಷ ನೀಡಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

4. ಪ್ರಾ.ಸಾ.4 ಟಿ ವೇಣುಗೋಪಾಲ ರವರು ತಮ್ಮ ಸಾಕ್ಷಿಯನ್ನು ನುಡಿಯುತ್ತಾ ದಿನಾಂಕ 11.04.2023 ರಂದು ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ.1 ಇವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರಿನ ಆದಾರದ ಮೇಲೆ ಪ್ರಕರಣವನ್ನು ದಾಖಲಿಸಿಕೊಂಡು, ಪ್ರ.ವ.ವ ವರದಿಯನ್ನು ತಯಾರಿಸಿರುತ್ತೇನೆ. ಘಟನಾ ಸ್ಥಳಕ್ಕೆ ಬೇಟಿ ನೀಡಿ ಚಾಸಾ.1 ಇವರು ತೋರಿಸಿದ ಸ್ಥಳದಲ್ಲಿ ಪಂಚರಾದ ಚಾಸಾ.6 ಮತ್ತು 7 ರವರ ಸಮಕ್ಷಮ ಪಂಚನಾಮೆ ಮಾಡಿ, ಕಚ್ಚಾ ನಕಾಶೆಯನ್ನು ತಯಾರಿಸಿ, ಪೋಟೋಗಳನ್ನು ತೆಗೆಸಿರುತ್ತೇನೆ. ಚಾಸಾ 2 ರಿಂದ 5 ರವರ ಹೇಳಿಕೆಗಳನ್ನು ಮಾಡಿಕೊಂಡಿರುತ್ತೇನೆ ಎಂದು ಸಾಕ್ಷ ನೀಡಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

5. ಪ್ರಾ.ಸಾ.4 ಮುಂದುವರೆದ ತಮ್ಮ ಸಾಕ್ಷಿಯನ್ನು ನುಡಿಯುತ್ತಾ ದಿನಾಂಕ 13.04.2023 ರಂದು ಗಾಯಾಳು ಮೃತ ಪಟ್ಟಿರುವುದರಿಂದ ಕಲಂ.304ಎ ಐಪಿಸಿ ಅಳವಡಿಸಿಕೊಂಡು ತನಿಖೆ ನಡೆಸಲು ಅನುಮತಿ ಕೋರಿ ನ್ಯಾಯಾಲಯಕ್ಕೆ ಕೋರಿಕೆ ನೀಡಿರುತ್ತೇನೆ. ದ್ವಿ ಚಕ್ರ ವಾಹನದ ಮಾಲೀಕರಿಗೆ ಕಲಂ 133 ಅಡಿಯಲ್ಲಿ ನೋಟಿಸ್ ಕೊಟ್ಟು ಉತ್ತರ ಪಡೆದಿರುತ್ತೇನೆ. ವಾಹನದ ತಪಾಸಣೆಗಾಗಿ ಮನವಿ ಸಲ್ಲಿಸಿರುತ್ತೇನೆ. ಆರೋಪಿಯನ್ನು ದಸ್ತಗಿರಿ ಮಾಡಿ ಬಿಡುಗಡೆ ಮಾಡಿರುತ್ತೇನೆ. ದಿನಾಂಕ 16.04.2023 ರಂದು ಐಎಮ್‌ವಿ ವರದಿಯನ್ನು ಪಡೆದಿರುತ್ತೇನೆ. ದಿನಾಂಕ 18.04.2023 ರಂದು ಶವ ಪಂಚನಾಮೆಯನ್ನು ನಡೆಸಿ ಮರಣೋತ್ತರ ಪರೀಕ್ಷೆ ಆದ ನಂತರ ಮೃತ ದೇಹವನ್ನು ಸಂಬಂಧಿಕರಿಗೆ ಕೊಟ್ಟಿರುತ್ತೇನೆ. ಮುಂದಿನ ತನಿಖೆಗಾಗಿ ಚಾಸಾ.18 ರವರಿಗೆ ನೀಡಿರುತ್ತೇನೆ ಎಂದು ಸಾಕ್ಷ ನೀಡಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

6. ನಿಮಗೆ ಇನ್ನೇನಾದರೂ ಹೇಳಲು ಇದೆಯೆ?
ಉತ್ತರಃ

7. ನಿಮ್ಮ ಸಾಕ್ಷಿ ವಿಚಾರಣೆ ಮಾಡಲಿಕ್ಕಿದೆಯಾ?
ಉತ್ತರಃ

ಆರೋಪಿಯ ವಿರುದ್ದ ಲಭ್ಯವಿರುವ ಮೇಲ್ಕಂಡ ಪ್ರಶ್ನೆಗಳನ್ನು ಆರೋಪಿಗೆ ಓದಿ ಹೇಳಿ ಆತ ನೀಡಿದ ಹೇಳಿಕೆಯನ್ನು ನಾನೇ ಬರೆದುಕೊಂಡಿರುವುದು ನಿಜವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

(ಶ್ರೀ ಅಜಿತ್ ದೇವರಮಣಿ)
ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು,

ದಿನಾಂಕಃ 30.07.2026

ಆರೋಪಿ ಸಹಿ ಃ